# ‘ನಂಬಿಕೆ’ಯ ಸುತ್ತಮುತ್ತ...

ನಾವು ದಿನ ನಿತ್ಯ ಬಳಸುವ ಹಲವು ಪದಗಳಲ್ಲಿ ‘ನಂಬಿಕೆ’ ಎಂಬುದೂ ಒಂದು. ‘ನನಗೆ ಆ ಮನುಷ್ಯನಲ್ಲಿ ನಂಬಿಕೆಯಿಲ್ಲ’, ‘ಈ ಕಾಲದಲ್ಲಿ ಯಾರನ್ನೂ ನಂಬುವಂತಿಲ್ಲ’ ‘ದೇವರಲ್ಲಿ ನಂಬಿಕೆ ಇರಿಸಿದವರಿಗೆ ಭಯವಿಲ್ಲ’– ಇಂಥ ಮಾತುಗಳನ್ನು ನಾವು ಆಡುತ್ತಲೋ, ಕೇಳುತ್ತಲೋ ಇರುತ್ತೇವೆ. ಆದರೆ ಇಷ್ಟೊಂದು ಬಳಕೆಯಲ್ಲಿರುವ ಈ ಪದಕ್ಕೆ ಹಲವು ಅರ್ಥವಲಯಗಳಿವೆ ಎಂಬುದನ್ನು ನಾವು ಯೋಚಿಸುವುದಿಲ್ಲ. ವಿಶ್ವಾಸ, ಶ್ರದ್ಧೆ, ನಿಷ್ಠೆ, ನೆಚ್ಚು, ಭರವಸೆ– ಇಂಥ ಬೇರೆ ಬೇರೆ ಪದಗಳನ್ನು ಬಳಸಬೇಕಾದ ಸಂದರ್ಭಗಳಲ್ಲೂ ನಾವು ‘ನಂಬಿಕೆ’ ಎಂಬುದನ್ನೇ ಉಪಯೋಗಿಸುತ್ತೇವೆ. ಇಂಗ್ಲಿಷ್‌ನಲ್ಲಿ ನಂಬಿಕೆಯ ವಿವಿಧ ಅರ್ಥಛಾಯೆಗಳಿರುವ Faith, belief, trust ಮುಂತಾದ ಪದಗಳನ್ನು ಅರ್ಥ ಸ್ಪಷ್ಟತೆಗಾಗಿ ಬಳಸುತ್ತಾರೆಂಬುದನ್ನು ಗಮನಿಸಬಹುದು.

ಏನೇ ಇರಲಿ, ನಂಬಿಕೆ ಎಂಬುದು ಮೂಲತಃ ವೈಯಕ್ತಿಕ ನೆಲೆಯಲ್ಲಿ ಹುಟ್ಟಿ– ಕೆಲವು ಸಂದರ್ಭಗಳಲ್ಲಿ ಸಾರ್ವತ್ರಿಕವಾಗಿ ವಿಸ್ತರಿಸಿಕೊಳ್ಳುವಂಥದು. ಭರವಸೆ ಅಥವಾ ನೆಚ್ಚಿಕೆಯಾದಾಗ, ನಂಬಿಕೆ ವ್ಯಕ್ತಿಯ ಪಾಲಿಗೆ ಆರೋಗ್ಯಕರ ಪರಿಣಾಮ ಉಂಟುಮಾಡುತ್ತದೆ. ನಂಬಿಕೆಯ ಆಲಂಬನವಿಲ್ಲದಿದ್ದರೆ, ಸಾಮಾನ್ಯ ಮನುಷ್ಯ ಅಧೀರನಾಗಿ ಬದುಕುವಂತಾಗುತ್ತದೆ. ತಾಯಿ ತನ್ನ ರಕ್ಷಣೆಗಿದ್ದಾಳೆ ಎಂಬ ನಂಬಿಕೆಯಿಂದ ಮಗು ನಿರ್ಭಯವಾಗಿ ಸಹಜ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುತ್ತದೆ. ಆ ನೆಚ್ಚಿಕೆಯಿಲ್ಲದಿದ್ದಲ್ಲಿ ಮಗುವಿನ ಮಾನಸಿಕ, ದೈಹಿಕ ಬೆಳವಣಿಗೆಗಳು ಕುಂಠಿತಗೊಳ್ಳುತ್ತವೆ. ಇದೇ ಬಗೆಯ ನೆಚ್ಚಿಕೆ, ದೇವರನ್ನು ಕುರಿತಾದ ನಂಬಿಕೆಯಾಗಿ– ದೇವರು ನಮ್ಮನ್ನು ಕಾಪಾಡುತ್ತಾನೆ ಎಂಬ ಭರವಸೆಯಾಗಿ ಮಾರ್ಪಾಡಾಗುತ್ತದೆ. ಬಹಳಷ್ಟು ಮಂದಿಗೆ ಈ ಭರವಸೆಯೇ ಬದುಕಿನ ಆಘಾತಗಳನ್ನು ಎದುರಿಸುವ ಸ್ಥೈರ್ಯವನ್ನು ಕೊಡುತ್ತದೆ. ‘To believe is to be strong. doubt cramps energy’ ಎಂಬಂಥ ಹೇಳಿಕೆಗಳು ಇದನ್ನೇ ಸಮರ್ಥಿಸುತ್ತವೆ.

ವ್ಯಕ್ತಿ ವ್ಯಕ್ತಿಗಳ ನಡುವಣ ನಂಬಿಕೆ (trust) ಲೋಕ ಜೀವನದ ತೇರು ಸುಗಮವಾಗಿ ಚಲಿಸುವ ಸಹಕಾರಿಯಾದ ಕೀಲೆಣ್ಣೆ ಎನ್ನಬಹುದು. ಒಂದು ಕುಟುಂಬದ ಅಥವಾ ಸಮುದಾಯದ ಸದಸ್ಯರು ಪರಸ್ಪರ ವಿಶ್ವಾಸದ ತಳಹದಿಯ ಮೇಲೆಯೇ ಜೀವಿಸುತ್ತಾರೆ. ನಂಬಿಕೆಯ ಜಾಗದಲ್ಲಿ ಸಂಶಯ, ಅಪನಂಬಿಕೆಗಳು ಕಾಣಿಸಿಕೊಂಡರೆ, ತಕ್ಷಣವೇ ಕ್ಷೋಭೆ ಭುಗಿಲೆದ್ದು, ಅನಾಹುತಕ್ಕೆ ಕಾರಣವಾಗುತ್ತದೆ. ಆಡಳಿತ ವಲಯದಲ್ಲೂ ಹೀಗೆಯೇ. ಅಧಿಕಾರದಲ್ಲಿರುವವರಲ್ಲಿ ಪಾರಸ್ಪರಿಕ ಸಂಶಯಗಳಿದ್ದರೆ ಆಡಳಿತ ವ್ಯವಸ್ಥೆ ಕುಸಿಯುತ್ತದೆ. ಪ್ರಾಮಾಣಿಕತೆ, ನಿಷ್ಠೆ, ವಿಶ್ವಾಸ, ಭರವಸೆ– ಇತ್ಯಾದಿಗಳೇ ಕುಟುಂಬ, ಸಮಾಜ, ರಾಷ್ಟ್ರ ವ್ಯವಸ್ಥೆಯ ಗಟ್ಟಿ ಇಟ್ಟಿಗೆಗಳು ಎನ್ನಬಹುದು.

ನಂಬಿಕೆಯ ಇನ್ನೊಂದು ಮುಖವೆಂದರೆ– ಆತ್ಮವಿಶ್ವಾಸ, ಅರ್ಥಾತ್ ನಮಗೆ ನಮ್ಮ ಬಗೆಗೆ ಇರುವ ನಂಬಿಕೆ. ನಮ್ಮ ವ್ಯಕ್ತಿತ್ವ ಬೆಳೆಯ ಬೇಕಾದರೆ, ನಾವು ಕೈಗೊಳ್ಳುವ ಕೆಲಸಗಳು ಯಶಸ್ವಿಯಾಗಬೇಕಾದರೆ, ಆತ್ಮವಿಶ್ವಾಸ ಅತ್ಯಂತ ಅಗತ್ಯ. ಅದರ ಬಲದಿಂದಾಗಿಯೇ ಅಸಾಧ್ಯವೆನ್ನಿಸಿದುದನ್ನು ಸಾಧಿಸುವವರಿದ್ದಾರೆ; ಅನಾಹುತಗಳನ್ನು ಎದುರಿಸಿ ಪಾರಾಗುವವರಿದ್ದಾರೆ. ಆತ್ಮವಿಶ್ವಾಸದ ಕೊರತೆ ಮನುಷ್ಯನನ್ನು ಕುಬ್ಜಗೊಳಿಸುತ್ತದೆ; ಅದರ ಅನುಪಸ್ಥಿತಿಯಲ್ಲಿ ಮನಷ್ಯ ಹೇಡಿಯಾಗುತ್ತಾನೆ; ನಿಸ್ಸತ್ವನೆನ್ನಿಸಿಕೊಳ್ಳುತ್ತಾನೆ.

ದೇವರು, ಮತ, ಧರ್ಮ, ಆಚರಣೆ– ಇತ್ಯಾದಿಗಳನ್ನು ಕುರಿತಾದ ಧಾರ್ಮಿಕ ನಂಬಿಕೆ ಮನುಷ್ಯ ಪಾರಂಪರಿಕವಾಗಿಯೋ, ವೈಯಕ್ತಿಕ ಒಲವಿನಿಂದಲೋ ಬೆಳೆಸಿಕೊಂಡ ಶ್ರದ್ಧೆ, ಹೀಗೆ ಖಾಸಗಿಯಾಗಿರುವ ಶ್ರದ್ಧೆಯನ್ನು ಇನ್ನೊಬ್ಬರ ಮೇಲೆ ಬಲವಂತವಾಗಿ ಹೇರಲು ಹೊರಟರೆ, ಘರ್ಷಣೆಗೆ ದಾರಿಯಾಗುತ್ತದೆ. ಒಬ್ಬಾತನ ನಂಬಿಕೆ ಇನ್ನೊಬ್ಬನಿಗೆ ಸ್ವೀಕಾರಾರ್ಹ ಆಗಲೇಬೇಕೆಂದೇನೂ ಇಲ್ಲವಷ್ಟೆ? ಜೊತೆಗೆ, ಒಬ್ಬನ ನಂಬಿಕೆ ಇನ್ನೊಬ್ಬನಿಗೆ ಮೂಢನಂಬಿಕೆಯಂತೆ ಕಾಣಲೂಬಹುದು, ಧಾರ್ಮಿಕ ನಂಬಿಕೆಗಳನ್ನು ಸಾರ್ವತ್ರಿಕಗೊಳಿಸಬೇಕೆಂಬ ಹಟದಿಂದಾಗಿ ವಿಪ್ಲವಗಳು ಕಾಣಿಸಿಕೊಳ್ಳುತ್ತವೆ ಎಂಬುದಕ್ಕೆ ಇತಿಹಾಸದಲ್ಲಿ ಸಾಕಷ್ಟು ಸಾಕ್ಷಿಗಳಿವೆ.

ನಂಬಿಕೆ ಎಂಬುದರ ನಿರಂತರ ಎದುರಾಳಿಯೆಂದರೆ ವೈಚಾರಿಕತೆ. ನಂಬಿಕೆಯು ಭಾವಾವಲಂಬಿಯಾದರೆ, ವೈಚಾರಿಕತೆ ಬುದ್ಧಿಯನ್ನೇ ಅವಲಂಬಿಸಿರುವಂಥದು. ನಂಬಿಕೆಗೆ ತರ್ಕ, ಜಿಜ್ಞಾಸೆಗಳ ಹಂಗಿಲ್ಲ; ಆದರೆ ವೈಚಾರಿಕತೆ ಎಲ್ಲವನ್ನೂ ಪ್ರಶ್ನಿಸಿ, ಪರೀಕ್ಷಿಸಿ, ಅನುಭವದ ಒರೆಗಲ್ಲಿಗೆ ತಿಕ್ಕಿ–ಬುದ್ಧಿಯ ಒಪ್ಪಿಗೆ ಸಿಕ್ಕಾಗ ಮಾತ್ರ ಅಂತಿಮ ತೀರ್ಮಾನಕ್ಕೆ ಬರುತ್ತದೆ. ವಿವೇಕಿಯಾದವನು ನಂಬಿಕೆ, ವೈಚಾರಿಕತೆಗಳೆರಡನ್ನೂ ಸಮನ್ವಯ ಗೊಳಿಸಿಕೊಂಡು ಬದುಕಲು ಪ್ರಯತ್ನಿಸುತ್ತಾನೆ.

■ ವೈನತೇಯ

## ಮಾತೇ ಮುತ್ತು

★ ದೇವರು ಕ್ಷಮಿಸುತ್ತಾನೆ. ಏಕೆಂದರೆ ಅದು ಅವನ ಉದ್ಯೋಗ!

-ಗಾದೆ

★ ಬಹುಮಟ್ಟಿನ ಮಾನಸಿಕ ಕ್ಲೇಶಗಳಿಗೆ– ವಾಸ್ತವ ಸಂಗತಿಗಳಿಗಿಂತ, ಕಾಲ್ಪನಿಕ ಸಂಗತಿಗಳೇ ಹೆಚ್ಚು ಕಾರಣ.

-ಅವ್ಯಕ್ತ

★ ಮುಂದೆ ಅನರ್ಥವು ಸಂಭವಿಸೀತೆಂಬ ಶಂಕೆಯಿದ್ದಾಗ, ಶುಭವನ್ನು ಬಯಸುವ ವಿವೇಕಿಯು, ಮೊದಲೇ ಅದಕ್ಕೆ ತಕ್ಕ ಪರಿಹಾರವನ್ನು ಚಿಂತಿಸಬೇಕು.

-ರಾಮಾಯಣ

★ ಬಗೆಬಗೆಯಾದ ಮನೋರೋಗಗಳು ಮತ್ತು ವ್ಯಾಧಿಗಳು ಆರೋಗ್ಯವನ್ನು ನಾಶ ಮಾಡುತ್ತವೆ. ಐಶ್ವರ್ಯವು ಇರುವೆಡೆಯಲ್ಲಿ ಆಪತ್ತುಗಳು ತುಂಬಿರುವವು. ಹುಟ್ಟಿದುದೆಲ್ಲವನ್ನೂ ಮೃತ್ಯು ಕೊಂಡೊಯ್ಯುವುದು. ನಿರಂಕುಶವಾದ ವಿಧಿ ಮಾಡಿರುವುದು ಯಾವುದು ಸ್ಥಿರವಾಗಿದೆ?

-ವೈರಾಗ್ಯ ಶತಕ

★ ಸೋತು ಹೋಗುತ್ತೇನೆಂಬ ಭಯವನ್ನು ಗೆಲ್ಲುವುದು ನಿಜವಾದ ಜಯ.

-ಪಾಲ್ ಸ್ವಿನಿ

★ ಪ್ರಯತ್ನದಿಂದ ಕಾರ್ಯ ಸಿದ್ಧಿಸುತ್ತವೆಯೇ ವಿನಾ ಬರಿಯ ಬಯಕೆಗಳಿಂದಲ್ಲ. ನಿದ್ರಿಸುತ್ತಿರುವ ಸಿಂಹದ ಬಾಯಲ್ಲಿ ಮೃಗಗಳು ಬಂದು ತಾವಾಗಿ ಪ್ರವೇಶಿಸುವುದಿಲ್ಲ.

-ಪಂಚತಂತ್ರ

★ ಯಾರು ಶ್ರೀಮಂತರ ಬಾಗಿಲ ಬಳಿ ಕಾದಿರಲಿಲ್ಲವೋ, ಅಗಲಿಕೆಯ ದುಃಖ ಅನುಭವಿಸಿಲ್ಲವೋ, ನಿರರ್ಥಕವಾಗಿ ಮಾತನಾಡಿಲ್ಲವೋ– ಅಂಥವನ ಜೀವನ ಧನ್ಯವಾದದ್ದು.

-ಹಿತೋಪದೇಶ

★ ಹತ್ತಿರ ಇರುವವರು ‘ತೃಪ್ತ’ರಾಗಿರುವಂತೆ ನೋಡಿಕೊ. ‘ದೂರ’ ಇರುವವರು ತಾವಾಗಿಯೇ ಬರುತ್ತಾರೆ.

-ಚೀನಾ ಗಾದೆ

★ ನಾಗರಿಕತೆ ಎಂದರೆ ಅದರ ನಿಜವಾದ ಅರ್ಥದಲ್ಲಿ ಅಪೇಕ್ಷೆಗಳನ್ನು ಹೆಚ್ಚಿಸಿಕೊಳ್ಳುವುದಲ್ಲ; ಬುದ್ಧಿಪೂರ್ವಕವಾಗಿ ತಾನೇ ಅಪೇಕ್ಷೆಗಳನ್ನು ನಿಗ್ರಹಿಸುವುದಾಗಿದೆ.

-ಮಹಾತ್ಮ ಗಾಂಧೀಜಿ

★ ತಾತ್ವಿಕ ಬದ್ಧತೆ ಇಲ್ಲದೆ, ಜಾತಿ ಅಸಮಾನತೆ ಬಗ್ಗೆ ಮಾತನಾಡುವವನು ಸಮಯಸಾಧಕ ಆಗಿರುತ್ತಾನೆ.

-ಅನುಭವಾಮೃತ

★ ದೇಶ ಎಂಥ ಮನುಷ್ಯರನ್ನು ರೂಪಿಸುತ್ತದೆ ಎಂಬುದೇ ನಾಗರಿಕತೆಯ ನಿಜವಾದ ಒರೆಗಲ್ಲು, ಜನಸಂಖ್ಯೆಯಲ್ಲ, ವಿಸ್ತಾರವಲ್ಲ.

-ಎಮರ್‌ಸನ್

★ ಜನ ಯಾವಾಗಲೂ ಒಬ್ಬನನ್ನು ಮೇಲೇರಿಸಿ ನಾಯಕ ಪಟ್ಟವನ್ನು ಕಟ್ಟುತ್ತಾರೆ. ದಬ್ಬಾಳಿಕೆದಾರರು ಹುಟ್ಟುವ ಮೂಲ ಇದೇ.

-ಪ್ಲೇಟೋ

★ ಜನತೆ ನಾಯಕ ಪೂಜೆಯನ್ನು ಅಪೇಕ್ಷಿಸುತ್ತದೆ; ಸಮಾಜವನ್ನು ರಕ್ಷಿಸುವ ಮಂತ್ರವಾದಿ ಇದ್ದಾನೆಂದು ನಂಬಲು ಆಶಿಸುತ್ತದೆ.

-ಅರ್ಥರ್ ಕ್ಲಟನ್ ಬ್ರೂಕ್

★ ನಾಲಿಗೆಯನ್ನು ಹತೋಟಿಯಲ್ಲಿಟ್ಟುಕೊಳ್ಳುವುದೇ ಮೊದಲ ಸದ್ಗುಣ.

-ಛಾಸರ್

★ ಚೆನ್ನಾಗಿ ಅಭ್ಯಾಸವಾಗುವ ಮುಂಚೆ ಯಾವುದೇ ಕೆಲಸ ಅತ್ಯಂತ ಕಠಿಣವೆಂದು ತೋರುತ್ತದೆ.

-ಸ್ಪೇನ್ ಗಾದೆ